ಆ) ಒಟ್ಟು ೧೪೫ ವಕ್ಫ್ ಸಂಸ್ಥೆಗಳಲ್ಲಿ ೫೨ ವಕ್ಫ್ ಸಂಸ್ಥೆಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ. ಇನ್ನುಳಿದ ಸಂಸ್ಥೆಗಳಿಗೆ ಅಗತ್ಯ ದಾಖಲಾತಿಗಳನ್ನು ಪಡೆದು ಅನುದಾನವನ್ನು ಬಿಡುಗಡೆ ಮಾಡಲಾಗುವುದು.

ಇ) ಬೀದರ್ ಜಿಲ್ಲೆಯಲ್ಲಿ ಒಟ್ಟು ೨೪೫೮ ವಕ್ಫ್, ಸಂಸ್ಥೆಗಳು ಇದ್ದು ಇವುಗಳಿಗೆ ಸೇರಿದ ಆಸ್ತಿಗಳನ್ನು ಮಂಡಳಿಯಲ್ಲಿ ನೋಂದಾಯಿಸಲಾಗಿದೆ. ಅದರಲ್ಲಿ ೫೫ ಆಸ್ತಿಗಳು ಅತಿಕ್ರಮಣ ಆಗಿದ್ದು, ಸದರಿ ಪ್ರಕರಣಗಳನ್ನು ವಕ್ಫ್ ಅಧಿನಿಯಮ ೧೯೯೫ ರ ಕಲಂ ೫೪ ರನ್ವಯ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ವಕ್ಫ್ ಆಸ್ತಿಗಳನ್ನು ರಕ್ಷಿಸಲು ಅವುಗಳ ಸುತ್ತ ಗೋಡೆಗಳನ್ನು ಕಟ್ಟಲು ಸರ್ಕಾರ ಅನುದಾನ ಮಂಜೂರು ಮಾಡಲಾಗುತ್ತದೆ. ಈ ಸಂಬಂಧ ೨೦೦೪-೦೫ ನೇ ಸಾಲಿನಲ್ಲಿ ೨೨೬ ವಕ್ಫ್, ಸಂಸ್ಥೆಗಳಿಗೆ ರೂ. ೪೬.೮೦ ಲಕ್ಷ ಬಿಡುಗಡೆ ಮಾಡಲಾಗಿದೆ.

೩೮೪೧ (೪೭೭೫) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬ (ಬಸವಕಲ್ಯಾಣ) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಸಮಾಜ ಇಲಾಖೆಯ ವತಿಯಿಂದ ನಡೆಸಲ್ಪಡುತ್ತಿರುವ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು; ಮತ್ತು ಎಲ್ಲೆಲ್ಲಿ; ಇವು ಎಲ್ಲೆಲ್ಲಿ ಇವೆ;

ಆ) ಈ ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಅಗತ್ಯ ಮೂಲಭೂತ ಸೌಕರ್ಯಗಳ ಕೊರತೆ ಮತ್ತು ಉತ್ತಮ ಗುಣ ಮಟ್ಟದ ಊಟ ದೊರೆಯದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಈ ಕೊರತೆಯನ್ನು ನೀಗಿಸಿಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಈ ವಿದ್ಯಾರ್ಥಿನಿಲಯಗಳ ನಿರ್ವಹಣೆಗೆ ಸರ್ಕಾರ ಕಳೆದ ಒಂದೂವರೆ ವರ್ಷಗಳಿಂದ ಖರ್ಚು ಮಾಡಿರುವ ಹಣದ ಮೊತ್ತವೆಷ್ಟು; ಈ ಪೈಕಿ ಕೆಲವು ವಿದ್ಯಾರ್ಥಿ ನಿಲಯಗಳಲ್ಲಿ ವಾರ್ಡನ್‌ಗಳು ಗೈರು ಹಾಜರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಳ್ಳುವುದು?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಬೀದರ್ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯು ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಒಟ್ಟು ೫ ವಸತಿನಿಲಯಗಳನ್ನು ನಡೆಸುತ್ತಿದೆ. ಸ್ಥಳವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಮೆಟ್ರಿಕ್ ಪೂರ್ವ ವಸತಿ ನಿಲಯಗಳು			ಮೆಟ್ರಿಕ್‌ನಂತರದ ವಸತಿ ನಿಲಯಗಳು		
ಬಾಲಕರು	ಬಾಲಕಿಯರ	ಒಟ್ಟು	ಬಾಲಕರು	ಬಾಲಕಿಯರು	ಒಟ್ಟು
೩೦	೦೮	೩೮	೧೨	೦೪	೧೬

ಆ) ಈ ವಿದ್ಯಾರ್ಥಿನಿಲಯಗಳಿಗೆ ಎಲ್ಲಾ ಅಗತ್ಯ ಮೂಲಭೂತ ಸೌಕರ್ಯಗಳನ್ನು ಹಾಗೂ ಒಳ್ಳೆ ಗುಣಮಟ್ಟದ ಊಟವನ್ನು ಒದಗಿಸಲಾಗುತ್ತಿದೆ.

ಇ) ಈ ವಸತಿ ನಿಲಯಗಳಿಗೆ ೨೦೦೪–೦೫ ನೇ ಸಾಲಿಗೆ ಒಟ್ಟು ರೂ. ೨೭೩.೧೮೫ ಲಕ್ಷ ಖರ್ಚಾಗಿರುತ್ತದೆ. ವಿದ್ಯಾರ್ಥಿ ನಿಲಯಗಳಲ್ಲಿ ವಾರ್ಡನ್‌ಗಳು ಗೈರು ಹಾಜರಾಗುತ್ತಿರುವುದು ಗಮನಕ್ಕೆ ಬಂದಿರುವುದಿಲ್ಲ. ಹಾಗೇನಾದರೂ ವಿದ್ಯಾರ್ಥಿ ನಿಲಯ ಮೇಲ್ವಿಚಾರಕರು ಅನದಿಕೃತ ಗೈರು ಹಾಜರಾದಲ್ಲಿ ಅಂತಹ ಮೇಲ್ವಿಚಾರಕರುಗಳ ಮೇಲೆ ಶಿಸ್ತಿನ ಕ್ರಮ ಜರುಗಿಸಲಾಗುವುದು.

ANNEXURE FOR L.A. QUESTION NO 4575

Sl. No.	DETAILS OF HOSTELS			SANCTIONED STRENGTH
	BIDAR DISTRICT			
	PRE-MATRIC HOSTELS			
1	GOVT BOYS HOSTEL	AURAD	AURAD	125
2	GOVT BOYS HOSTEL	KAMALANAGAR	AURAD	50
3	GOVT BOYS HOSTEL	LAKKANGAON	AURAD	50
4	GOVT BOYS HOSTEL	BASAVAKALYAN	BASAVAKALYAN	140
5	GOVT BOYS HOSTEL	HULSOOR	BASAVAKALYAN	90
6	GOVT BOYS HOSTEL	MUDBI	BASAVAKALYAN	60
7	GOVT BOYS HOSTEL	RAJESHWARA	BASAVAKALYAN	35
8	GOVT BOYS HOSTEL	YERABAGA	BASAVAKALYAN	25
9	GOVT BOYS HOSTEL	BHALKI	BHALKI	200
10	GOVT BOYS HOSTEL	KTHAKA CHINCHOLI	BHALKI	50
11	GOVT BOYS HOSTEL	MEHAKAR	BHALKI	50
12	GOVT BOYS HOSTEL	NITTUR	BHALKI	50
13	GOVT BOYS HOSTEL	VARWATTI	BHALKI	50
14	GOVT BOYS HOSTEL	CHIDRI	BIDAR	50
15	GOVT BOYS HOSTEL	JANAWADA ROAD BIDAR	BIDAR	200
16	GOVT BOYS HOSTEL	JANWADA	BIDAR	50
17	GOVT BOYS HOSTEL	MALEGAON	BIDAR	25
18	GOVT BOYS HOSTEL	MUTTANAGI	BIDAR	50
19	GOVT BOYS HOSTEL	NOWBAD	BIDAR	50
20	GOVT BOYS HOSTEL	SIDDITALIM	BIDAR	200
21	GOVT BOYS HOSTEL	BEMAL KHED	HUMNABAD	50
22	GOVT BOYS HOSTEL	CHITTAGUPPA	HUMNABAD	125
23	GOVT BOYS HOSTEL	DUBALGUNDI	HUMNABAD	50
24	GOVT BOYS HOSTEL	HALLIKHED	HUMNABAD	50
25	GOVT BOYS HOSTEL	HUDGI	HUMNABAD	25
26	GOVT BOYS HOSTEL	HUMNABAD	HUMNABAD	150
27	GOVT BOYS HOSTEL	DABAKA	AURAD	50
28	GOVT BOYS HOSTEL	MANNEKAHALLI	HUMNABAD	25
29	GOVT BOYS HOSTEL	MUCCHALAM	BASAVAKALYAN	50
30	GOVT BOYS HOSTEL	HALLIKHED	HUMNABAD	50
31	GOVT GIRLS HOSTEL	AURAD	AURAD	75
32	GOVT GIRLS HOSTEL	BASAVAKALYAN	BASAVAKALYAN	90
33	GOVT GIRLS HOSTEL	HULSOOR	BASAVAKALYAN	60
34	GOVT GIRLS HOSTEL	BHALKI	BHALKI	75
35	GOVT GIRLS HOSTEL	NITTUR	BHALKI	50
36	GOVT GIRLS HOSTEL	BIDAR	BIDAR	100
37	GOVT GIRLS HOSTEL	CHITTAGUPPA	HUMNABAD	50
38	GOVT GIRLS HOSTEL	HUMNABAD	HUMNABAD	75
		TOTAL		2800
	POST-MATRIC HOSTELS			
1	GOVT. COLLEGE BOYS HOSTEL	BIDAR	BIDAR	50

Sl. No.	DETAILS OF HOSTELS			SANCTIONED STRENGTH
2	GOVT. COLLEGE GIRLS HOSTEL	BIDAR	BIDAR	50
3	GOVT. COLLEGE BOYS HOSTEL	BHALKI	BHALKI	50
4	GOVT. COLLEGE BOYS HOSTEL	BASAVAKALYANA	BASAVAKALYANA	50
5	PUC BOYS COLLEGE HOSTEL, NAUBAD, BIDAR	NAUBAD, BIDAR	BIDAR	50
6	GOVT. COLLEGE BOYS HOSTEL -I	MYLUR	BIDAR	50
7	GOVT. COLLEGE BOYS HOSTEL -II	MYLUR	BIDAR	50
8	GOVT. COLLEGE GIRLS HOSTEL, DABAKA, BHALKI	DABAKA	BHALKI	50
9	GOVT. COLLEGE BOYS HOSTEL	AURAD	AURAD	50
10	GOVT. COLLEGE BOYS HOSTEL	BASAVAKALYANA	BASAVAKALYANA	50
11	GOVT. COLLEGE BOYS HOSTEL	HUMANABAD	HUMANABAD	50
12	GOVT. COLLEGE BOYS HOSTEL, BIDAR	BIDAR	BIDAR	50
13	GOVT. COLLEGE GIRLS HOSTEL	BASAVAKALYANA	BASAVAKALYANA	50
14	GOVT.COLLEGE BOYS HOSTEL, BIDAR	BIDAR	BIDAR	50
15	GOVT.COLLEGE BOYS HOSTEL	SANTAPUR	AURAD	50
16	GOVT.COLLEGE GIRLS HOSTEL	AURAD	AURAD	50
		TOTAL		800

ಶ್ರೀ ಎಸ್.ಎಲ್. ಭೋಜೇಗೌಡ (ಪರಿಷತ್) (ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಿಂದ **ವರ್ಗಾಯಿಸಿರುವ ಪ್ರಶ್ನೆ) ಶ್ರೀ ನಾಗರಾಜ ಶೆಟ್ಟಿ ಬಿ. (ಬಂಟ್ವಾಳ)** :– ಮಾನ್ಯ ಬೃಹತ್ ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳ ಹಾಗೂ ಮೂಲಭೂತ ಸೌಲಭ್ಯಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳು ವಿದ್ಯುತ್‌ನ್ನು ಉತ್ಪಾದಿಸುತ್ತವೆ;

ಆ) ಪ್ರತಿ ಕಾರ್ಖಾನೆಯು ಉತ್ಪಾದಿಸುವ ವಿದ್ಯುತ್ ಪ್ರಮಾಣ ಎಷ್ಟು; ವಿವರ ನೀಡುವುದು;

ಇ) ಈ ವಿದ್ಯುತ್‌ನ್ನು ಯಾವ ದರದಲ್ಲಿ ಖರೀದಿ ಮಾಡಲಾಗುತ್ತದೆ ; ಕಾರ್ಖಾನೆವಾರು ವಿವರ ನೀಡುವುದು;

ಈ) ಸದರಿ ಕಾರ್ಖಾನೆಗಳಿಗೆ ಖರೀದಿಸಿದ ವಿದ್ಯುತ್‌ಗೆ ಹಣ ನೀಡಲು ಬಾಕಿ ಇದೆಯೇ ; (ಇದ್ದಲ್ಲಿ ವಿವರೆ ನೀಡುವುದು)?